**ಈ ದಿನ ದಿನಾಂಕಃ 16.02.2023 ರಂದು ಪ್ರಾಸಾ-10 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ ಟಿ.ಜಿ.ವಿ. ವಕೀಲರಿಂದಃ**

11. ನಾನು 9 ನೇ ತರಗತಿವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಮಧ್ಯಪಾನ ಬಿಡಿಸುವ ಕೇಂದ್ರದಿಂದ ನಾನು ಈ ಹಿಂದೆ ಸಾಕ್ಷಿ ನುಡಿಯಲು ಮತ್ತು ಈ ದಿನ ಬಂದಿರುತ್ತೇನೆಂದರೆ ಸರಿ. ಸದರಿ ಕೇಂದ್ರದಿಂದ ನನ್ನನ್ನು ಚಾಸಾ-1 ಮಂಜುನಾಥ ಅವರು ಕರೆದುಕೊಂಡು ಬಂದಿರುತ್ತಾರೆಂದರೆ ಸರಿಯಲ್ಲ. ಸದರಿ ಕೇಂದ್ರಕ್ಕೆ ಮಂಜುನಾಥ ಅವರು 1 ಬಾರಿ ಮಾತ್ರ ಬಂದಿರುತ್ತಾರೆ. ಈ ದಿನ ಅವರು ಬಂದಿರಲಲ್ಲಿ, ಆದರೆ ನ್ಯಾಯಾಲಯದ ಹೊರಗೆ ಇರುತ್ತಾರೆ. ಮಧ್ಯಪಾನ ಬಿಡಿಸುವ ಕೇಂದ್ರಕ್ಕೆ ನಾನು ಮಂಜೂನಥ ಅವರು ಸೇರಿಸಿರುತ್ತಾರೆಂದರೆ ಸರಿಯಲ್ಲ. ಈಗಲೂ ಸಹ ಸದರಿ ಕೇಂದ್ರಕ್ಕೆ ನನ್ನ ಪರವಾಗಿ ಹಣವನ್ನು ಮಂಜುನಾಥ ಅವರೇ ಸಂದಾಯ ಮಾಡುತ್ತಿದ್ದಾರೆಂದರೆ ಸರಿಯಲ್ಲ.

12. ವಿವಾಧಿತ ಘಟನೆ ನಡೆದಿದೆ ಎಂದು ಹೇಳುವ 2019 ರಲ್ಲಿ ನನಗೆ ಧೂಮಪಾನ, ಮಧ್ಯಪಾನ ಮತ್ತು ಸಲ್ಯೂಷನ್ ಹೊಡೆಯುವ ಅಭ್ಯಾಸ ಇತ್ತು ಎಂದರೆ ಸರಿ. ಅ ಸಮಯದಲ್ಲಿ ನಾನು ಮಧ್ಯಪಾನ ಮಾಡಿ ಸೆಲ್ಯೂಷನ್ ಹೊಡೆದು ಮತ್ತಿನಲ್ಲಿ ಕೊಂಗಾಡಿಯಪ್ಪ ವಿಗ್ರಹವನ್ನು ಹೊಡೆದು ಹಾಕಿದ್ದೇನೆಂದರೆ ಸರಿಯಲ್ಲ. ಆ ವಿಷಯದಲ್ಲಿ ನಾನು ಜೈಲಿಗೆ ಹೋಗಿದ್ದೇನೆಂದರೆ ಸರಿ. ದುಡ್ಡುಕೊಟ್ಟು ಜಾಮೀನು ನೀಡಿ ನನ್ನನ್ನು ಜೈಲಿನಿಂದ ಮಂಜುನಾಥ ಅವರೇ ಬಿಡಿಸಿರುತ್ತಾರೆಂದರೆ ಸರಿಯಲ್ಲ. ನಮ್ಮ ತಾಯಿ ಬಿಡಿಸಿರುತ್ತಾರೆ.

13. ದಿನಾಂಕಃ 07.01.2019 ರಂದು ಸಂಜೆ 06.30 ಗಂಟೆಸಮಯದಲ್ಲಿ ನಾನು ಮಧ್ಯಪಾನ ಮಾಡಿರುತ್ತೇನೆಂದರೆ ಸರಿ. 2 ನೇ ಬಾರಿ ದಾಸನೊಂದಿಗೂ ಸಹ ಮಧ್ಯಪಾನ ಮಾಡಿರುತ್ತೇನೆಂದರೆ ಸರಿ. ಕೆಸಿಬಿ ಚೌಲ್ಟ್ರೀಯ ಬಳಿ ಇರುವ ಸನತ್ ಬಾರಿನಲ್ಲಿ 3 ನೇ ಬಾರಿಯೂ ಸಹ ಮಧ್ಯಪಾನ ಮಾಡಿರುತ್ತೇನೆಂದರೆ ಸರಿ. ನಂತರ ಪ್ರೀತಿ ವೈನ್ಸ್ ಶಾಪ್‌ನಿಂದ ಮಧ್ಯವನ್ನು ತರಿಸಿ ಪುನಃ ನಾನು ಮತ್ತು ದಾಸ ಕುಡಿದಿರುತ್ತೇವೆಂದರೆ ಸರಿ. 4 ಸಲ ಕುಡಿದಿದ್ದರಿಂದ ನೆನಪು ಕಳೆದುಕೊಂಡಿದ್ದೇನು ಎಂದರೆ ಸರಿ. ಪ್ರೀತಿ ವೈನ್ಸ್ ಶಾಪನಿಂದ ಕೊರಚರಹಟ್ಟಿಯು 100 ಮೀಟರ್ ದೂರದಲ್ಲಿರುತ್ತದೆ. ಆ ದಿನ ಆನಂದನು ಯಾವ ರೀತಿ ಬಟ್ಟೆ ಧರಿಸಿದ್ದನು ಎಂದು ಈಗ ನನಗೆ ಹೇಳಲು ಬರುವುದಿಲ್ಲ. ನನ್ನನ್ನು ನಿಲ್ಲಿಸಿ ನನ್ನಿಂದ 50 ಮೀಟರ್ ದೂರದಲ್ಲಿ ಆನಂದ ಮತ್ತು ದಾಸ ಹೋಗಿರುತ್ತಾರೆ. ಅವರಿಬ್ಬರೂ ನನಗೆ ಕಾಣಿಸುತ್ತಿರಲಿಲ್ಲ.

14. ಕಿರುಚಾಡುತ್ತಿರುವುದು ಕೇಳಿಸುತ್ತಿತ್ತು ಆದರೆ ಯಾವ ವಿಷಯಕ್ಕೆಂದು ಗೊತ್ತಿರುವುದಿಲ್ಲ. ನಾನು ನೋಡಿದಾಗ ಆರೋಪಿಯ ಕೈಯಲ್ಲಿ ಮಚ್ಚು ಇತ್ತು. ಆರೋಪಿ ಮತ್ತು ದಾಸ ಇಬ್ಬರೂ ಬೇಟಿಯಾಗಿರುವುದಿಲ್ಲ ಮತ್ತು ನನ್ನನ್ನು ಬಿಟ್ಟು ಅವರಿಬ್ಬರೇ ಸ್ವಲ್ಪ ದೂರ ಹೋಗಿರುವುದಿಲ್ಲ ಮತ್ತು ಅರೋಪಿಯ ಕೈಯಲ್ಲಿ ಮಚ್ಚು ಇರಲಿಲ್ಲ ಎಂದರೆ ಸರಿಯಲ್ಲ. ನನ್ನನ್ನು ಬಿಟ್ಟು ಅವರಿಬ್ಬರೂ ಹೊಗಿದ್ದ 50 ಮೀಟರ್ ದೂರದಲ್ಲಿ ಕತ್ತಲು ಇತ್ತು. ನಾನು ಹತ್ತಿರ ಹೋದಾಗ ಆರೋಪಿಯು ನನಗೂ ಸಹ ಮಚ್ಚಿನಿಂದ ಹೊಡೆದಿದ್ದರಿಂದ ಪ್ರಜ್ಞೆ ಹೋಗಿದ್ದು 10-15 ನಿಮಿಷದ ನಂತರ ಪುನಃ ಪ್ರಜ್ಞೆ ಬಂದಿರುತ್ತದೆ. ದಾಸನನ್ನು ಹೊಡೆದಿರುತ್ತಾರೆಂದು ಹೇಳಿ ನಾನು ಮಂಜುನಾಥ ಅವರನ್ನು ಕರೆದುಕೊಂಡು ಬಂದಿರುತ್ತೇನೆ. ಆರೋಪಿ ಅಲ್ಲಿರಲಿಲ್ಲ ಮತ್ತು ನನಗೆ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ಕುಡಿದ ಮತ್ತಿನಲ್ಲಿದ್ದುದರಿಂದ ನನಗೆ ಯಾರು ಹೊಡೆರುತ್ತಾರೆಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ.

15. 9 ನೇ ತಾರೀಖಿನವರೆಗೆ ಪೋಲೀಸರು ಮತ್ತು ವೈದ್ಯರು ನನ್ನನ್ನು ಬೇಟಿ ಮಾಡುವುದಾಗಲೀ ಮತ್ತು ನನ್ನ ಹೇಳಿಕೆಯನ್ನಾಗಲೀ ಮಾಡಿಕೊಂಡಿರುವುದಿಲ್ಲ. ಪೋಲೀಸರು ನನ್ನ ಶರ್ಟು ಮತ್ತು ಪ್ಯಾಂಟ್‌ನ್ನು ತೆಗೆದುಕೊಂಡಿರುತ್ತಾರೆ. ಕಳೆದ ಮುಖ್ಯ ವಿಚಾರಣೆಯಲ್ಲಿ ಬನಿಯನ್ ಮತ್ತು ಅಂಡರವಿಯರ್ ಅನ್ನೂ ಸಹ ತೆಗೆದುಕೊಂಡಿರುತ್ತಾರೆಂದು ನಾನು ಹೇಳಿರುವುದಿಲ್ಲ. ಆ ರೀತಿ ಹೇಳಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಶರ್ಟು ಮತ್ತು ಪ್ಯಾಂಟ್‌ನ್ನು ತೆಗೆದುಕೊಳ್ಳುವ ಸಮಯದಲ್ಲಿ ಪೋಲೀಸರು ಯಾವುದೇ ಫೋಟೋವನ್ನು ತೆಗೆದುಕೊಂಡಿರುವು ದಿಲ್ಲ. ಪೋಲೀಸ್ ಠಾಣೆಯಲ್ಲಿ ನಾನು ಸಹಿ ಮಾಡಿರುವುದಿಲ್ಲ. ಆದರೆ ನ್ಯಾಯಾಲಯದಲ್ಲಿ ಹೇಳಿಕೆ ಪಡೆದುಕೊಂಡ ನಂತರ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನಾನು ಪೋಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿ ಸದರಿ ಹೇಳಿಕೆಗೆ ಪೋಲೀಸ್ ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ.

16. ದಿನಾಂಕಃ 11.01.2019 ರಂದು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ. ಎಷ್ಟು ಗಂಟೆಗೆ ಎಂದು ನನಗೆ ಈಗ ನೆನಪು ಇರುವುದಿಲ್ಲ. ನ್ಯಾಯಾಧೀಶರಲ್ಲಿಗೆ ನಾನು ಹೇಳಿಕೆ ನೀಡಲು ಅವರಲ್ಲಿಗೆ ಹೋದ ಸಮಯದಲ್ಲಿ ನನ್ನ ಜೊತೆ ಮಂಜುನಾಥ ಇದ್ದರು ಎಂದರೆ ಸರಿಯಲ್ಲ. ಪೋಲೀಸರು ಮತ್ತು ಮಂಜುನಾಥ ಅವರು ಇದೇ ರೀತಿ ಹೇಳುವಂತೆ ನನಗೆ ಹೆದರಿಸಿದ್ದರು ಎಂದರೆ ಸರಿಯಲ್ಲ. ನ್ಯಾಯಾಧೀಶರಲ್ಲಿ ನಾನು ನೀಡಿದ ಹೇಳಿಕೆಯಲ್ಲಿ ಅಜ್ಜಿಯೊಬ್ಬರ ಮನೆಗೆ ನೀರು ಹಾಕಲು ರಾತ್ರಿ ಸುಮಾರು 09.30 ಗಂಟೆ ಸಮಯದಲ್ಲಿ ಹೋಗಿರುತ್ತೇನೆಂದು ತಿಳಿಸಿರುತ್ತೇನೆಂದರೆ ಸರಿ. ನ್ಯಾಯಾಧೀಶರಲ್ಲಿ ಹೇಳಿಕೆ ನೀಡುವ ಸಮಯದಲ್ಲಿ ಮಂಜುನಾಥ ಅವರು ನನ್ನ ಜೊತೆ ಇದ್ದರೂ ಸಹ ನನ್ನ ಜೊತೆ ಇರಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ

ಸರಿಯಲ್ಲ. ಆ ಸಮಯದಲ್ಲಿ ನಾನು ಮಂಜುನಾಥ ಅವರ ಮನೆಯಲ್ಲಿಯೇ ಕೆಲಸ ಮಾಡುತ್ತಿದ್ದರಿಂದ ಅವರು ಹೇಳಿದಂತೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

17. ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ ರಾತ್ರಿ 09.30 ಗಂಟೆಗೆ ಅಜ್ಜಿ ಮನೆಗೆ ನೀರು ಹಾಕಲು ಹೋಗಿದ್ದೆ ಎಂದು ಹೇಳಿಕೆ ನೀಡಿರುವುದಿಲ್ಲ. ಮು.ಮಾ. 10 ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆಂದರೆ ಸರಿ. ಪೋಲೀಸರು ನನಗೆ ಮಚ್ಚನ್ನು ತೋರಿಸಿ ಗುರುತಿಸುವಂತೆ ಹೇಳಿರುವುದಿಲ್ಲ. ಮೃತ ದಾಸನ ಸಾವಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಘಟನೆಯಲ್ಲಿ ನನಗೂ ಸಹಯಾವುದೇ ಗಾಯಗಳಾಗಿರುವುಲ್ಲ ಎಂದರೆ ಸರಿುಲ್ಲ. ಪೊಲೀಸರು ಮತ್ತು ಮಂಜುನಾಥನ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ